KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ಸಂಖ್ಯೆಃ 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಶಂಕರ | **ಪಿ.ಡಬ್ಲ್ಯೂ** | 08 |
| **ತಂದೆಯ ಹೆಸರು** | ನಾರಾಯಣ | **ಸಿ.ಡಬ್ಲ್ಯೂ** | 13 |
| **ವಯಸ್ಸು** | 37 ವರ್ಷ | | |
| **ಉದ್ಯೋಗ** | ವ್ಯಾಪಾರ | | |
| **ವಾಸಸ್ಥಳ** | ಸಖರಾಯಪಟ್ಟಣ, ಕಡೂರು | | |

**ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ**

**ದಿಃ 29-12-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. **ಈಗ ನ್ಯಾಯಾಲಯದ ಮುಂದೆ ವಿಸಿ ಮೂಲಕ ಕಾಣುತ್ತಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ.14 ರವರು ನನಗೆ ಗೊತ್ತಿಲ್ಲ.**

2. **ಈಗ ತೋರಿಸಿದ ದಾಖಲೆಗಳಲ್ಲಿ ನನ್ನ ರುಜು ಇರುತ್ತದೆ. ಸದರಿ ದಾಖಲೆ ಪ್ರಕರಣದ ಸಾಕ್ಷಿದಾರರಿಗೆ ನೀಡಿದ ನೋಟೀಸ್ ಮತ್ತು ಮಹಜರಾಗಿದ್ದು ಅವುಗಳನ್ನು ಕ್ರಮವಾಗಿ ನಿಶಾನೆ ಪಿ.16 ಮತ್ತು ಪಿ.17 ಎಂದು, ಸಹಿಯನ್ನು ನಿಶಾನೆ ಪಿ.16(ಎ) ಮತ್ತು ಪಿ.17(ಎ) ಎಂದು ಗುರುತಿಸಲಾಯಿತು. ಈಗ್ಗೆ 6-7 ತಿಂಗಳುಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ನಿಶಾನೆ ಪಿ.16 ಮತ್ತು ಪಿ.17 ಕ್ಕೆ ರುಜು ಮಾಡಿರುತ್ತೇನೆ. ಈಗ**

ತೋರಿಸಿದ ಫೋಟೋಗಳಲ್ಲಿ ನನ್ನ ಇರುವಿಕೆ ಕಂಡು ಬರುತ್ತದೆ. ಸದರಿ ಫೋಟೋಗಳನ್ನು ನಿಶಾನೆ ಪಿ.18 ಮತ್ತು ಪಿ.19 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಮುಂದೆ ಯಾವುದೇ ಮಹಜರ ಮಾಡಿಲ್ಲ ಮತ್ತು ಯಾವುದೇ ಬಟ್ಟೆಗಳನ್ನು ಅಮಾನತು ಪಡಿಸಿಕೊಂಡಿಲ್ಲ. ನಿಶಾನೆ ಪಿ.16 ಮತ್ತು ಪಿ.17 ಕ್ಕೆ ಬೇರೆ ಯಾರು ರುಜು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. (ನ್ಯಾಯಾಲಯದ ಮುಂದೆ ಕವರಿನಲ್ಲಿ ಸುತ್ತಿ ಮೊಹರು ಮಾಡಲಾದ ಕವರುಗಳಿಂದ ಒಂದು ಶರ್ಟು ಮತ್ತು ಪ್ಯಾಂಟ್ ನ್ನು ತೆಗೆದು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ಗುರುತಿಸಿರುವುದಿಲ್ಲ. ಮಾನ್ಯ ಪಿ.ಪಿ. ರವರ ಕೋರಿಕೆಯ ಮೇರೆಗೆ ಸದರಿ ಬಟ್ಟೆಗಳನ್ನು ಗುರುತಿಸುವ ಸಲುವಾಗಿ ಸದರಿ ಶರ್ಟನ್ನು ಮು.ಮಾ.6 ಎಂದು ಮತ್ತು ಪ್ಯಾಂಟ್ ನ್ನು ಮು.ಮಾ.7 ಎಂದು ಗುರುತಿಸಲಾಯಿತು). ಸಾಕ್ಷಿಯು ಮು.ಮಾ.6 ಮತ್ತು ಮು.ಮಾ.7 ಗಳ ಕವರುಗಳ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಸಹಿಯನ್ನು ಗುರುತಿಸಿದ್ದರಿಂದ ಮು.ಮಾ.6(ಎ) ಮತ್ತು ಮು.ಮಾ.7(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಮಹಜರಿಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

3. ದಿಃ 11-01-2021 ರಂದು ಚಾಸಾ.30 ರವರು ನನಗೆ ಮತ್ತು ಚಾಸಾ.14 ರವರನ್ನು ಠಾಣೆಗೆ ಕರೆಸಿ ನಮಗೆ ನಿಪಿ.16 ರಂತೆ ನೋಟೀಸ್ ನೀಡಿ

ಆರೋಪಿ ಹಾಜರು ಪಡಿಸಿದ ಮು.ಮಾ.6 ಮತ್ತು ಮು.ಮಾ.7 ಬಟ್ಟೆಗಳನ್ನು ನಮ್ಮ ಸಮಕ್ಷಮ ನಿಪಿ.17 ರಂತೆ ಮಹಜರ ಮಾಡಿ ಅಮಾನತು ಪಡಿಸಿಕೊಂಡು ನಿಶಾನೆ ಪಿ.18 ಮತ್ತು ಪಿ.19 ರಂತೆ ಫೋಟೋಗಳನ್ನು ತೆಗೆಸಿದಾಗ ನಾವುಗಳು ರುಜು ಮಾಡಿರುತ್ತೇವೆ ಎಂದರೆ ಸರಿಯಲ್ಲ.

4. ನಾನು 6 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಸಾಮಾನ್ಯ ಜ್ಞಾನ ಇದೆ ಎಂದರೆ ಸರಿ. ನಾನು ಯಾವುದೇ ದಾಖಲೆಗೆ ರುಜು ಮಾಡುವ ಮೊದಲು ಓದಿ ತಿಳಿದುಕೊಳ್ಳದೇ ರುಜು ಮಾಡುತ್ತೇನೆ ಎಂದರೆ ಸರಿ. ನನಗೆ ಎಲ್ಲಾ ಮಾಹಿತಿ ಇದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ರೂ.

<u>Visit **ecourts.gov.in** for updates or download mobile app “**eCourts Services**” from Android or iOS</u>